**ಸಾಕ್ಷಿಯನ್ನು ದಿನಾಂಕಃ04.08.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃಶ್ರೀ ಆರ್ ಕೆ ವಕೀಲರಿಂದಃ-**

ಪ್ರತಿವಾದಿಯು ನನ್ನ ವಿರುದ್ಧ ಅಸಲು ದಾವೆ ಸಂಖ್ಯೆ:33/2018 ರಲ್ಲಿ ದಾವೆ ಹಾಕಿದ್ದು ತದನಂತರ ನಾನು ಈ ದಾವೆಯನ್ನು ಅವರ ವಿರುದ್ಧ ಹಾಕಿದ್ದೇನೆ ಎಂದರೆ ಸರಿ. ಅವರು ದಾವೆ ಹಾಕಿದ ಕಾರಣ ನಾನು ಈ ದಾವೆ ಹಾಕಿದ್ದೇನೆ ಎಂದರೆ ಸರಿ. ಪ್ರತಿವಾದಿಯ ದಾವೆಯಲ್ಲಿ ನನ್ನ ವಿರುದ್ಧ ಪ್ರತಿವಾದಿಯ ಆಸ್ತಿಯ ದಕ್ಷಿಣದ ಕಡೆ ನಾವು ಸರ್ಜಾಗಳನ್ನು ನಿರ್ಮಿಸಬಾರದೆಂದು ತಡೆಯಾಜ್ಞೆ ಇತ್ತು ಎಂದರೆ ನಮ್ಮ ಜಮೀನಿನಲ್ಲಿ ನಾವು ಯಾವುದೇ ಸರ್ಜಾಗಳನ್ನು ನಿರ್ಮಿಸಿಲ್ಲ. ನಾನು ಮನೆಗೆ ಮೋಲ್ಡ್ ಹಾಕುತ್ತಿದ್ದಾಗ ಪ್ರತಿವಾದಿಯು ನನ್ನ ವಿರುದ್ಧ ಪೊಲೀಸರಿಗೆ ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ನಾನು ದಿಃ28.03.2018 ರಂದು ಅಸಲು ದಾವೆ ಸಂಖ್ಯೆ:33/2018 ರಲ್ಲಿ ಹಾಜರಾಗಿ ತಕರಾರು ಸಲ್ಲಿಸಿದ್ದೆ ಎಂದರೆ ಸರಿ. ವಾದಪತ್ರದಲ್ಲಿ ಅಥವಾ ಪ್ರಮಾಣಪತ್ರದಲ್ಲಿ ಅಸಲು ದಾವೆ ಸಂಖ್ಯೆ:33/2018 ರ ಬಗ್ಗೆ ಉಲ್ಲೇಖಿಸಿಲ್ಲ ಎಂದರೆ ಸರಿ. ಈಗಾಗಲೇ ಚಾಲ್ತಿಯಲ್ಲಿರುವ ಅಸಲು ದಾವೆ ಸಂಖ್ಯೆ: 33/2018 ರ ದಾವೆಯಲ್ಲಿ ವಿಷಯ ಮುಚ್ಚಿಟ್ಟು ದಾವೆ ಹಾಕಿ ನಾನು ನಿರ್ಮಿಸುತ್ತಿರುವ ಕಟ್ಟಡದ ಪ್ಲಾಸ್ಟಿಂಗ್ ಗೆ ತೊಂದರೆ ಮಾಡಬಾರದೆಂಬ ತಡೆಯಾಜ್ಞೆ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ತಡೆಯಾಜ್ಞೆಯನ್ನು ದುರ್ಬಳಸಿ ನಾನು ಪ್ರತಿವಾದಿಯ ಆಸ್ತಿಯಲ್ಲಿ ಸರ್ಜಾಗಳನ್ನು ನಿರ್ಮಿಸಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿಯು ಈ ದಾವೆಯಲ್ಲಿ ಹಾಜರಾಗಿ ತಕರಾರು ಸಲ್ಲಿಸಿದ ನಂತರ ನನ್ನ ಪರವಾಗಿ ತಡೆಯಾಜ್ಞೆಯು ವಜಾ ಆಯಿತು ಎಂದರೆ ಸರಿ, ಅವರದ್ದು ತಡೆಯಾಜ್ಞೆ ವಜಾ ಆಯಿತು. ನನ್ನ ಅರ್ಜಿ ವಜಾ ಆದ ನಂತರ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ.

ಪ್ರಸ್ತುತ ದಾವೆಯಲ್ಲಿ ಪ್ರತಿವಾದಿಯು ಏನು ತಕರಾರು ಸಲ್ಲಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಪ್ರತಿವಾದಿಯು ಅವರ ಆಸ್ತಿಯಲ್ಲಿ ನಾನು ಸರ್ಜಾ ಹಾಕಿದ್ದೇನೆಂದು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿ ಆಸ್ತಿ ಸರ್ವೇನಂಬರ್ 61 ರಲ್ಲಿದ್ದು ಅದು 1 ಗುಂಟೆ

ವಿಸ್ತೀರ್ಣ ಇದೆ ಎಂದರೆ ಸರಿ. ಪ್ರತಿವಾದಿಯ ಆಸ್ತಿಯು 33 X 33 ಅಡಿಗಳಿದ್ದು ಆ ಬಗ್ಗೆ ಪಂಚಾಯ್ತಿಯಲ್ಲಿ ಖಾತೆ ಆಗಿದೆ ಎಂದರೆ ಸರಿ. ಪ್ರತಿವಾದಿಯ ಆಸ್ತಿಯ ಪೂರ್ವಕ್ಕೆ ಟಿ.ಎನ್. ಸುಬ್ಬರಾಯಪ್ಪ ಎಂದರೆ ಸರಿ. ಪಶ್ಚಿಮಕ್ಕೆ ನಾರಾಯಣಸ್ವಾಮಿ ಎಂದರೆ ಸರಿ. ಉತ್ತರಕ್ಕೆ ಪಿ ಡಬ್ಲ್ಯೂ ಡಿ ರಸ್ತೆ ಎಂದರೆ ಸರಿ. ದಕ್ಷಿಣಕ್ಕೆ ಮೊದಲು ಸರ್ವೇನಂಬರ್ 61ರ ಮಾಲೀಕರು ಸುಬ್ಬರಾಯಪ್ಪರವರು ಇದ್ದು ಪ್ರಸ್ತುತದಲ್ಲಿ ನನ್ನ ಆಸ್ತಿ ಇದೆ ಎಂದರೆ ಸರಿ.

ದಿಃ04.12.1995ರಂದು ಪ್ರತಿವಾದಿಯು ಅವರ ಆಸ್ತಿಯನ್ನು ವೆಂಕಟೇಶಪ್ಪರವರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ. ಪ್ರತಿವಾದಿಯು ಪೂರ್ವ-ಪಶ್ಚಿಮಃ 27 ಅಡಿ, ಉತ್ತರ-ದಕ್ಷಿಣಃ 21 ಅಡಿ ವಿಸ್ತೀರ್ಣದಲ್ಲಿ ಮನೆ ಕಟ್ಟಿದ್ದಾರೆ ಎಂದರೆ ಮನೆ ಕಟ್ಟಿರುವುದು ನಿಜ, ಆದರೆ ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಪ್ರತಿವಾದಿಯು ತನ್ನ ಮನೆಯ ದಕ್ಷಿಣದ ಕಡೆಗೆ ಕಿಟಕಿಗಳನ್ನು ಮತ್ತು ಅದರ ಮೇಲೆ ಸರ್ಜಾಗಳನ್ನು ನಿರ್ಮಿಸಿದ್ದಾರೆ ಎಂದರೆ ಸರಿ. ಆ ಕಿಟಕಿ ಸರ್ಜಾಗಳು ನನ್ನ ಆಸ್ತಿಯಲ್ಲಿ ಬರುವುದಿಲ್ಲ. ಪ್ರತಿವಾದಿಯು 1998ರಲ್ಲಿ ಆ ರೀತಿ ಮನೆ ಕಟ್ಟಿ ಸರ್ಜಾಗಳನ್ನು ಹಾಕಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವಾಗ ಪ್ರತಿವಾದಿಯ ಮನೆ ಇತ್ತು ಅದರ ದಕ್ಷಿಣಕ್ಕೆ ಕಿಟಕಿ ಸರ್ಜಾಗಳು ಇತ್ತು ಎಂದರೆ ಸರಿ.

ನನಗೆ ಮಾರಾಟ ಮಾಡಿದ್ದ ವ್ಯಕ್ತಿಗೆ ಮತ್ತು ಪ್ರತಿವಾದಿಗೆ ಆಸ್ತಿಯ ಬಗ್ಗೆ ಯಾವುದೇ ತಕರಾರು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ದಾವಾ ಆಸ್ತಿಯನ್ನು ಅಳತೆ ಮಾಡಿಸಿದ್ದೆ, ಆ ಬಗ್ಗೆ ದಾಖಲೆ ಇದೆ. ಆ ರೀತಿ ಸರ್ವೇ ಮಾಡಿಸಿದಾಗ ಪ್ರತಿವಾದಿಗೆ ನೋಟೀಸು ಕೊಟ್ಟಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

ಪ್ರತಿವಾದಿಯು ತನ್ನ ಆಸ್ತಿಯ ದಕ್ಷಿಣದ ಕಡೆಗೆ 5 X 33 ಅಡಿಗಳ ವಿಸ್ತೀರ್ಣವನ್ನು ಖಾಲಿ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು 17 X 40 ಅಡಿಗಳ ವಿಸ್ತೀರ್ಣದಲ್ಲಿ ಮನೆ ಕಟ್ಟಿರುತ್ತೇನೆ. ಪೂರ್ವ-ಪಶ್ಚಿಮಃ40 ಅಡಿ, ಉತ್ತರ-ದಕ್ಷಿಣಃ17 ಅಡಿಯಲ್ಲಿ ಮನೆ ಕಟ್ಟಿದ್ದೇನೆ. ನನ್ನ ಮನೆಯ ಮಹಡಿ

ಮೇಲೆ ನೀರನ್ನು ಸಂಗ್ರಹಿಸಲು ಪೈಪನ್ನು ಪೂರ್ವ ದಿಕ್ಕಿಗೆ ಇಟ್ಟಿರುತ್ತೇನೆ. ನಾನು ನನ್ನ ಸಂಪೂರ್ಣ ವಿಸ್ತೀರ್ಣಕ್ಕೆ ಕಾಂಪೌಂಡ್ ಹಾಕಿರುವುದಿಲ್ಲ. ನಾನು ಪೂರ್ವ, ಪಶ್ಚಿಮ ಮತ್ತು ದಕ್ಷಿಣದ ಕಡೆಗೆ ಖಾಲಿ ಜಾಗ ಬಿಟ್ಟಿರುವುದಿಲ್ಲ. ಉತ್ತರಕ್ಕೆ ನಾನು 5 X 40 ಅಡಿಗಳ ಪ್ಯಾಸೇಜನ್ನು ಬಿಟ್ಟಿರುತ್ತೇನೆ. ನಮ್ಮ ಆಸ್ತಿಯ ಹಾಗೂ ಪ್ರತಿವಾದಿಯ ಆಸ್ತಿಯ ನಡುವೆ 5 ಅಡಿ ಅಂತರವಿದೆ. ಸದರಿ 5 ಅಡಿ ವಿಸ್ತೀರ್ಣದಲ್ಲಿಯೇ ಪ್ರತಿವವಾದಿಯು ತಮ್ಮ ಮನೆಯ ಸಜ್ಜಾ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ, ಪ್ರತಿವಾದಿಯ ಸಜ್ಜಾ ನಮ್ಮ 5 ಅಡಿ ವಿಸ್ತೀರ್ಣದಲ್ಲಿ ಬರುವುದಿಲ್ಲ. ನನ್ನ ಹಾಗೂ ಪ್ರತಿವಾದಿಯ ಆಸ್ತಿಯ ನಡುವೆ ಇರುವ ಖಾಲಿ ಜಾಗವು 5 ಅಡಿ ವಿಸ್ತೀರ್ಣವಿದೆ. ನಾನು ನನ್ನ ಆಸ್ತಿಯ ಪೂರ್ವ, ಪಶ್ಚಿಮ ಮತ್ತು ದಕ್ಷಿಣದ ಕಡೆಗೆ ಖಾಲಿ ಜಾಗ ಬಿಟ್ಟಿದ್ದರೂ ಸಹಾ ಪ್ರತಿವಾದಿಯ 5 ಅಡಿ ವಿಸ್ತೀರ್ಣವನ್ನು ಒತ್ತುವರಿ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ದಾವಾ ಆಸ್ತಿಯಲ್ಲಿ ಪಾಯ ಹಾಕುವ ಸಮಯದಲ್ಲಿ ಪ್ರತಿವಾದಿಯು ತಕರಾರು ವ್ಯಕ್ತಪಡಿಸಿದ್ದು ನಾನು ನನ್ನ ವಿಸ್ತೀರ್ಣದಲ್ಲಷ್ಟೇ ಪಾಯ ಹಾಕುತ್ತಿದ್ದೇನೆಂದು ಹೇಳಿದ್ದಕ್ಕೆ ಪ್ರತಿವಾದಿಯು ಒಪ್ಪಿಕೊಂಡರು ಎಂದರೆ ಆ ರೀತಿ ಯಾವುದೇ ತಕರಾರು ಮಾಡಿಲ್ಲ. ನಾನು ಖರೀದಿ ಮಾಡಿದ್ದ ಸಂಪೂರ್ಣ ವಿಸ್ತೀರ್ಣಕ್ಕೆ ನಾನು ಪಾಯ ಹಾಕಿದ್ದೇನೆ ಎಂದರೆ ಸರಿ. ನನ್ನ ಆಸ್ತಿಯ ಪೂರ್ವಕ್ಕೆ ಪಿ ಡಬ್ಲ್ಯೂಡಿ ರಸ್ತೆ ಇದೆ.

ನಾನಾ ದಾವಾ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ಪೂರ್ವಕ್ಕೆ ಸುಬ್ಬರಾಯಪ್ಪನವರ ಆಸ್ತಿ ಎಂದು ತೋರಿಸಿದೆ. ನನ್ನ ಕ್ರಯಪತ್ರದಲ್ಲಿರುವ ಆಸ್ತಿಯ ಚೆಕ್ಕುಬಂದಿಗೂ ವಾದಪತ್ರದಲ್ಲಿರುವ ಚೆಕ್ಕುಬಂದಿಗೂ ತಾಳೆಯಾಗುತ್ತಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವ 25 ವರ್ಷಗಳ ಮೊದಲೇ ಪ್ರತಿವಾದಿಯು ಅವರ ಆಸ್ತಿಯನ್ನು ಖರೀದಿ ಮಾಡಿ ಸ್ವಾಧೀನದಲ್ಲಿದ್ದರು ಎಂದರೆ ಸರಿ. ನಿಪಿ-4 ರಲ್ಲಿ ಕಾಣುವಂತೆ ನನ್ನ ಮನೆಯ ಮೋಲ್ಡ್ /ಸಜ್ಜಾ ಪ್ರತಿವಾದಿಯ ಕಿಟಕಿಯ ಸಜ್ಜಾದ ಮೇಲೆ ಬರುವಂತೆ ಕಟ್ಟಿದ್ದೇವೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಕಾಣುತ್ತಿರುವ ಖಾಲಿ ಜಾಗವು

ನಮ್ಮ ಪ್ಯಾಸೇಜ್ ಆಗಿದ್ದು ಅದರ ಕೊನೆಯಲ್ಲಿ ಪಾಯ ಕೂಡ ಹಾಕಿದ್ದೇವೆ. ನಾನು ಮನೆಯ ಸಜ್ಜಾವನ್ನು 2018 ರಲ್ಲಿ ನಿರ್ಮಿಸಿದ್ದೆ ಎಂದರೆ ಸರಿ. ನಾನು ಮನೆ ಕಟ್ಟುತ್ತಿರುವಾಗ ಸಿಮೆಂಟ್ ಬೇರೆ ಸಾಮಗ್ರಿಗಳು ಪ್ರತಿವಾದಿಯ ಕಿಟಕಿಯ ಸಜ್ಜಾ ಮೇಲೆ ಬಿದ್ದು ಅವರ ಸಜ್ಜಾ ಒಡೆದು ಹೋಗಿದೆ ಎಂದರೆ ನನಗೆ ಹೇಳಲಾಗುವುದಿಲ್ಲ.

ನಿಪಿ-4 ರಲ್ಲಿ ಕಾಣುತ್ತಿರುವ ಖಾಲಿ ಜಾಗವು 5 ಅಡಿ ವಿಸ್ತೀರ್ಣದ್ದಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಯು ತನ್ನ ಆಸ್ತಿಯ ದಕ್ಷಿಣಕ್ಕೆ ಬಿಟ್ಟಿರುವ 5 ಅಡಿ ಖಾಲಿ ಜಾಗದಲ್ಲಿ ಸಜ್ಜಾ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಕಿಟಕಿಯ ಸಜ್ಜಾವು 2 ಅಡಿ ಅಗಲ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು 3 ಅಡಿ ಅಗಲ ಸಜ್ಜಾ ಹಾಕಿರುತ್ತೇನೆ.

ದಾವಾ ಆಸ್ತಿಯನ್ನು ಮತ್ತು ಪ್ರತಿವಾದಿಯ ಆಸ್ತಿಯನ್ನು ಅಳತೆ ಮಾಡಲು ಮತ್ತು ಸಜ್ಜಾಗಳ ಸ್ಥಿತಿಯನ್ನು ಗುರ್ತಿಸಲು ನ್ಯಾಯಾಲಯದಿಂದ ನಿಯೋಗಿಯನ್ನು ನಿಯೋಜಿಸಲು ನನಗೆ ಯಾವುದೇ ತಕರಾರು ಇಲ್ಲ.

ಪ್ರತಿವಾದಿಯ ಗೋಡೆಯಿಂದ 5 ಅಡಿ ದಕ್ಷಿಣದ ಕಡೆ ವಿಸ್ತೀರ್ಣವು ಪ್ರತಿವಾದಿಗೆ ಸೇರಿದ್ದು ಅದಾದ ನಂತರ ಇರುವ ಜಾಗದಲ್ಲಿ ನನ್ನ ಮಾರಾಟಗಾರರು ಸ್ವಾಧೀನದಲ್ಲಿದ್ದು ನನಗೆ ಅಷ್ಟೇ ವಿಸ್ತೀರ್ಣ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ಸಂಪೂರ್ಣ ಆಸ್ತಿಯಲ್ಲಿ ಪಾಯ ಹಾಕಿದ್ದರೂ ಸಹಾ ಪ್ರತಿವಾದಿಗಳ ಆಸ್ತಿಯಲ್ಲಿ ಸಜ್ಜಾ ನಿರ್ಮಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮನೆ ಕಟ್ಟಡ ನಿರ್ಮಾಣ ಮಾಡುವ ಸಮಯದಲ್ಲಿ ಪಂಚಾಯ್ತಿಯಿಂದ ಲೈಸೆನ್ಸ್ ಪಡೆದಿಲ್ಲ. ನಾನು ಲೈಸೆನ್ಸ್ ಪಡೆಯದೇ ಅಕ್ರಮವಾಗಿ ಮನೆ ಕಟ್ಟಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯು ಅವರ 5 ಅಡಿ ಜಾಗದಲ್ಲಿ ನಾನು ಸಜ್ಜಾ ಹಾಕಬಾರದೆಂದು ದಾವೆ ಹಾಕಿದ ನಂತರ ನಾನು ಈ ದಾವೆ ಹಾಕಿದ್ದೇನೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ. )

ಓ ಹೇ ಕೇ ಸರಿ ಇದೆ.

(ಕರ್ನ ಸಿಂಗ್ ಆರ್.ಯು)
**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಶ್ರೀನಿವಾಸಪುರ**